ಭಾರತ ಜನರೇ। ಕೈಯುಳ್ಳವರೇ ಕಾಲುಳ್ಳವರೇ। ಮುಚ್ಚಿದ ಬಾಗಿಲ ತೆರೆಯಿರಿ ನೀವು। ಕಾಲಯಾಪನೆಯ ಸಮಯವಿದಲ್ಲ।।1।। ಶ್ರಮವೇ ಗಂಗಾ ಯಮುನಾ ಸ್ನಾನ। ಶ್ರಮವೇ ಕಾಶಿ ಕಂಚಿಯಾತ್ರೆ। ಇದುವೇ ದೇವನ ಧಾಮವು। ಶ್ರಮವೇ ಜೀವನ ಸಾರ ವಿಶೇಷ।।2।। ಶ್ರಮವೇ ವೃದ್ಧಿಯ ಸಿದ್ಧಿಯ ದಾತ। ಇದುವೇ ಗೀತೆಯಪಾಠವು। ಶ್ರಮಕೆ ಸರಿಯಿಹ ಔಷಧವಿಲ್ಲ। ಶ್ರಮದಲ್ಲಿಹುದು ಎಲ್ಲರ ಸುಖವು।।3।। ಕೆಲಸದ ಮೌಲ್ಯ ಅನಂತವು। ಆದಿ ದೇವನ ಶ್ರಮವನು ಕೇಳಿ। ಕಾಷ್ಠಾಚಾಯಗಳ ಗುರುವಿಗೆ ಇತ್ತ। ಉಭಯ ಸಂಧ್ಯೆಯಲಿ ಸೇವೆಯ ಗೈದ।।4।। ಶ್ರಮವೇ ಸ್ತ್ರೀಯರ ಕಂಠಾಭರಣ। ಶ್ರಮವೇ ಮನುಜನ ಮನೋನಿಗ್ರಹ। ಇದುವೇ ದೇವನ ಧಾಮವು। ಸೇವಾ ದಾನವ ಮಾಡಿರಿ ಅಣ್ಣಾ। ಭಕ್ತ ವಿನೋಬಾ ಕರೆಯುತಲಿಹರು। ಶ್ರದ್ಧೆಯು ಬೆಲೆಗೆ ನಿಲುಕದ ನಿಧಿಯು।।5।।

ಹಸಿರಾಗಲಿ ಒಣ ನೆಲ(ಲಾವಣಿ) **ರಾಗ : ಮೋಹನ**

ಹಸಿರಾಗಲಿ ಒಣ ನೆಲ ಪೈರುಗಳಿಂದಲಿ ಎಲ್ಲೆಲ್ಲೂ ಈ ನಾಡಿನಲಿ। ಹಸಿವಿಂಗಲು ಜನ ಹಗಲಿರುಳೆನ್ನದೆ ದುಡಿಯುತಲಿಹರು ಹರುಷದಲಿ।।ಪ।। ಹುಸಿಯಾಗಲಿ ಬಡತನವೆನ್ನುವ ನುಡಿಯದು ಎಂದೆಂದೂ ಈ ದೇಶದಲಿ।।ಅ.ಪ।। ಹೊಸಯುಗ ಬಾಳಿಗೆ ಹೊಸಚೇತನವದು। ಹೊಮ್ಮುತಲೇ ಇರಲಿ।। ಮಿತವಾಗಲಿ ಭೂದಾಹವು। ಮನೆಮಾಲಿಕ ಜನಕೆ(2ಸಾರಿ)। ಹಿತವಾಗಲಿ ಗತಿಕಾಣದ ನೆಲೆಯಿಲ್ಲದ ದೀನರಿಗೆ(2ಸಾರಿ)। ನೆರವಾಗಿರಿ ಬಡರೈತರ ದಿನಗೂಲಿಯ ಹೆಚ್ಚಳಕೆ। ನೆರವಾಗಿರಿ ಜನ ಬಾಲಕ ಶ್ರಮಿಕರ ದಾಸ್ಯವಿಮೋಚನೆಗೆ।।1।। ಗಿರಿಜನ ದಲಿತರು ದೀನರು ಅಂಧರು ಅಂಗವಿಹೀನರ ಏಳಿಗೆಗೇ(2ಸಾರಿ)। ತೋರಿಸಿ ಕನಿಕರ ಕುಡಿಯಲು ನೀರಿಗೆ ನೀರಿಲ್ಲದ ಕುಗ್ರಾಮದಲಿ। ನೀಡಿರಿ ಬೆಂಬಲ ಬಡಜನ ಬದುಕಲು। ಗೃಹ ಕೈಗಾರಿಕೆ ಕ್ಷೇತ್ರದಲಿ। ನೆಲೆಯನೆ ಕಾಣದ ನಿರ್ಗತಿಕರಿಗೆ। ವಾಸಕೆ ವಸತಿಯ ನೀಡುತಲಿ।।2।। ಕತ್ತಲು ಕವಿದಿಹ ಗ್ರಾಮಗಳೆಲ್ಲವ ಮಿಂಚಿನ ಬೆಳಕಲಿ ಬೆಳಗಿಸಿರಿ। ಕೊಳಚೆ ಕೊಂಪೆಗಳ ಶುಚಿಯಾಗಿರಿಸಲು। ನವನಾಗರಿಕತೆ ಸೂತ್ರವ ಬಳಸಿ।।ಅಬಲೆ ವನಿತೆಯ ಅನಾಥ ಶಿಶುಗಳ ಸಂರಕ್ಷಣೆಗೆ ಶ್ರಮವಹಿಸಿ। ನಾಡಿನ ಮೇಲ್ಮೆಗೆ ಮಿತಸಂತಾನವೆ ಬಾಳಿನ ಭಾಗ್ಯದ ಬೆಳಕೆನ್ನಿ।।3।। ಲಕ್ಷಾಂತರದ ಹಳ್ಳಿಗರನ್ನ ಅಕ್ಷರ ಕ್ರಾಂತಿಗೆ ಗುರಿಪಡಿಸಿ। ಅನಕ್ಷರಸ್ಥರ ಜ್ಞಾನ ವೃದ್ಧಿಗೆ ದಾರಿದೀಪವು ನೀವಾಗಿ। ತೆರಿಗೆ ವಂಚಕರ ಕ್ರೂರ ಶೋಷಕರ ದೋಷ ವಣಿಕರ ದಂಡಿಸುತೆ।। ನಾಡ ಸಂಪದವ ದುಡಿದು ಬೆಳೆಸುತೆ। ಹಾಡಿ ನಮಿಸುತೆ ನಾಡಗೀತೆ।।4।।

ನಿಂದಾಸ್ತುತಿ

ಅಕ್ಕಾ ಕೇಳೆ ನಿನ್ನ ತಪಸಿಯರೊಳಗೊಬ್ಬ **ರಾಗ: ಆನಂದಭೈರವಿ**

ಅಕ್ಕ ಕೇಳೆ ನಿನ್ನ ತಪಸಿಯರೊಳಗೊಬ್ಬ। ಮುಕ್ಕಣ್ಣ ಗೀವರಂತೆ।।ಪ।। ಮೂರ್ಖನೋ ಗಿರಿರಾಜ ವಿಗಡಮುನಿ ಮಾತನೆ। ಲೆಕ್ಕಿಸಿ ಮದುವೆ ಮಾಡಿಕೊಡುವನಂತೆ।।ಅ.ಪ।। ತಲೆ ಎಲ್ಲ ಜಡೆಯಂತೆ ಅದರೊಳಗೆ ಜಲವಂತೆ। ತಿಲಕ ಫಣೆಗೆ ಬಾಲಚಂದ್ರನಂತೆ। ಹೊಳೆವ ಕಿಡಿಗಣ್ಣನಂತೆ ನಂಜುಗೊರಳನಂತೆ। ತಲೆರುಂಡ ಮಾಲೆಯ ಕೊರಳಿಗಾಕಿಹನಂತೆ।।1।। ಉರಗ ಭೂಷಣನಂತೆ ಭಸ್ಮ ಲೇಪನನಂತೆ। ಕರಿಯ ಚರ್ಮಾಂಬರ ಉಡಿಗೆಯಂತೆ। ತಿರಿದುಂಬುವವನಂತೆ ಬಿಳಿಯ ಮೈಯವನಂತೆ। ನಿರುತ ಢಮರುವ ಬಾರಿಸುವ ಜೋಗಿಯಂತೆ।।2।। ಹಡೆದವಳಿಲ್ಲವಂತೆ ಎತ್ತನೇರುವನಂತೆ। ಅಡವಿಗಿರಿಗಳಲ್ಲಿ ಇಪ್ಪನಂತೆ।। ಒಡನೆ ಪುಲಿದೊಗಲದ ಹಾಸಿಗೆ ಇಹುದಂತೆ। ನುಡಿಗೊಮ್ಮೆ ರಾಮಾ ರಾಮಾ ಎಂಬ ಸ್ಮರಣೆಯಂತೆ।।3।। ಮಾರನರಿಪುವಂತೆ ಐದು ಮೋರೆಗಳಂತೆ। ಆರೂ ಇಲ್ಲದ ಪರದೇಶಿಯಂತೆ। ಧಾರುಣಿಯೊಳು ಗುರು ಮಹಿಪತಿ ಸುತಪ್ರಭೋ। ಭವತಾರಕ ಶಿವನೆಂದು। ಮೊರೆ ಹೋಗಬೇಕಂತೆ।।4।।

ಆ ದೇವನದೆಂಥ ದೊಡ್ಡಸ್ತಿಕೆ ರಾಗ: ಶುದ್ಧಧನ್ಯಾಸಿ

ಆ........ ದೇವನದೆಂಥ ದೊಡ್ಡಸ್ತಿಕೆ ಬಿಡು ನನ್ನ ದೊರೆಮ್ಯಾಲ। ನನ್ನ ಹೊರತು ಇನ್ನೊಂದು ಹೆಣ್ಣ ಮ್ಯಾಲಿಲ್ಲ ಇವಗ ಖ್ಯಾಲ।। ರಾಮ ರಾಮನಂತೆ ಹೊಗಳಿ ಹೊಗಳುತಾರೆ। ರಾಮನೇನು ಶುದ್ಧ। ಯಾರ ಮಾತ ಕೇಳಿ ತನ್ನ ಸತಿಯನು ಅಡವಿಗೆ ಅಟ್ಟಿದ್ದ।। ಬ್ರಹ್ಮದೇವನಂತೆ ಬಹಳ ಹಿರಿಯನಂತೆ। ಬುದ್ಧಿ ಐತ ಅವಗ।। ಮೂರು ಜನ ಹೆಂಡಿರ್ಯಾತಕ ಪ್ರೀತಿಯ ಬಗಿಹ್ಯಾಂಗ।। ಹೇಳಬೇಡ ಶಿವನೇಳಿಗೆ ಗೌರಿಯ। ಗೋಳಿ ಗೊಳಿಸಿ ಬಿಟ್ಟ।। ಹೇಳಕೇಳದೆ ತನ್ನ ಜಟೆಯೊಳು ಗಂಗೆಯ ಧರಿಸಿದ್ದ।। ಕೃಷ್ಣನದೆಂತು ಕೆಟ್ಟತನವ ನೋಡು। ಎಷ್ಟು ಹೆಂಡಿರವಗಾ।। ಒಬ್ಬರಿಗಿಂತ ಹೆಚ್ಚು ಜನ ಹಿಡಿಸಿತ ಹೃದಯದಾಗ।।

ಆರು ಬದುಕಿದರಯ್ಯ ರಾಗ: ಮುಖಾರಿ, ತ್ರಿಪುಟತಾಳ

ಆರು ಬದುಕಿದರಯ್ಯ ಹರಿ ನಿನ್ನ ನಂಬಿ। ತೋರು ಈ ಧರೆಯೊಳಗೆ ಒಬ್ಬರನು ಕಾಣೆ ಕೃಷ್ಣ।।ಪ।। ಕಲಹ ಬಾರದ ಮುನ್ನ ಕರ್ಣನೊಬ್ಬನ ಕೊಂದೆ। ಸುಲಭದಲಿ ಕೌರವರ ಮನೆಯ ಮುರಿದೆ।। ನೆಲನ ಬೇಡಲು ಪೋಗಿ ಬಲಿಯ ಭೂಮಿಗೆ ತುಳಿದೆ। ಮೊಲೆಯನುಣ್ಣಲು ಪೋಗಿ ಪೂತನಿಯ ಕೊಂದೆ।।1।। ಕರುಳೊಳಗೆ ಕತ್ತರಿಯನಿಟ್ಟು ಹಂಸಧ್ವಜನ। ಸರಸದಿಂ ಮಗಳ ಗಂಡನ ಕೊಲಿಸಿದೆ।। ಮರುಳಿನಿಂದಲಿ ಪೋಗಿ ಭೃಗುಮುನಿಯ ಕಣ್ಣೊಡೆದೆ। ಅರಿತು ನರಕಾಸುರನ ಹೆಂಡತಿಯ ತಂದೆ।।2।। ತಿರಿದುಂಬ ದಾಸರ ಕೈಯ ಕಪ್ಪವ ಕಟ್ಟಿಸಿಕೊಂಡೆ। ತಿರುಮಲಾಚಾರ್ಯ ಶ್ರೀ ಗುರುವೇ ಬಲ್ಲ।। ವರಕಾಗಿ ನೆಲೆಯಾದಿ ಕೇಶವನ ಭಜಿಸಿದರೆ। ತಿರಿವೆನೆಂದರೆ ತಿರುಪೆ ಕೂಳುಟ್ಟದೈ ಕೃಷ್ಣ।।3।।

ಎಂಥಾ ಚೆಲುವಗೆ ಮಗಳನು ರಾಗ: ಅಭೇರಿ, ಆದಿತಾಳ

ಎಂಥಾ ಚೆಲುವಗೆ ಮಗಳನು ಕೊಟ್ಟನು। ಗಿರಿರಾಜನು ನೋಡಮ್ಮ ಮ್ಮ।।ಪ।। ಕಂತುಹರ ಶಿವ ಚೆಲುವನೆನ್ನುತ। ಮೆಚ್ಚಿದನು ನೋಡಮ್ಮ ಮ್ಮಾ।।ಅ.ಪ.।। ಮೋರೆ ಐದು ಮೂರು ಕಣ್ಣು। ವಿಪರೀತವ ನೋಡಮ್ಮ ಮ್ಮಾ।। ಕೊರಳೊಳು ರುಂಡಮಾಲೆಯ। ಧರಿಸಿದ ಉರಗಭೂಷಣನ ನೋಡಮ್ಮ ಮ್ಮಾ।।1।। ತಲೆಯೆಂಬೋದು ನೋಡಿದರೆ ಜಡೆ। ಹೊಳೆಯುತಿದೆ ನೋಡಮ್ಮ ಮ್ಮಾ।। ಹಲವು ಕಾಲದ ತಪಸಿ ರುದ್ರನ ಮೈ ಬೂದಿಯ ನೋಡಮ್ಮ ಮ್ಮಾ।।2।। ಭೂತ ಪ್ರೇತ ಪಿಶಾಚಿಗಳೆಲ್ಲ। ಪರಿವಾರವು ನೋಡಮ್ಮ ಮ್ಮಾ।। ಈತನ ನಾಮವು ಒಂದೇ ಮಂಗಳ। ಮುಪ್ಪುರಹರನ ನೋಡಮ್ಮ ಮ್ಮಾ।।3।। ಮನೆಯೆಂಬುವುದು ಸ್ಮಶಾನವು ನೋಡೆ। ಗಜ ಚರ್ಮಾಂಬರವಮ್ಮ ಮ್ಮಾ।। ಹಣವೊಂದಾದರು ಕೈಯೊಳಗಿಲ್ಲ। ಕಪ್ಪರವನು ನೋಡಮ್ಮ ಮ್ಮಾ।।4।। ನಂದಿವಾಹನ ನೀಲಕಂಠನ। ನಿರ್ಗುಣನ ನೋಡಮ್ಮ ಮ್ಮಾ।। ಇಂದಿರೆರಮಣ ಶ್ರೀ ಪುರಂದರವಿಠಲನ। ಪೊಂದಿದವನ ನೋಡಮ್ಮ ಮ್ಮಾ।।5।।

ಒಲಿದೆ ಯಾತಕಮ್ಮಾ ಲಕುಮಿ ರಾಗ: ರೇವತಿ, ಆದಿತಾಳ

ಒಲಿದೆ ಯಾತಕಮ್ಮಾ ಲಕುಮಿ। ವಾಸುದೇವಗೆ।।ಪ।। ಶುದ್ಧ ನೀಲವರ್ಣದ ಮೈಯ ಕಪ್ಪಿನವನಿಗೆ ಹ್ಯಾಗೆ ।।ಅ.ಪ।। ಹುಟ್ಟಿದ ಮನೆಗಳ ಬಿಟ್ಟು, ಕಳ್ಳ ದಿಟ್ಟತನದಿ ಗೋಕುಲದಲ್ಲಿ ಬೆಳೆದ। ಚಟ್ಟಿ ಸಹಿತ ಹಾಲು ಕುಡಿದ, ಅಲ್ಲಿ ದಿಟ್ಟ ಕಾಳಿಂಗನ ಹೆಡೆಯ ತುಳಿದವನಿಗೆ।।1।। ಗೊಲ್ಲರ ಮನೆಗಳ ಪೊಕ್ಕು, ಅಲ್ಲಿ ಗುಲ್ಲು ಮಾಡದೆ ಮೊಸರೆಲ್ಲ ಸವಿದ। ಮೆಲ್ಲನೆ ಸವಿಮಾತನಾಡಿ। ಅಲ್ಲಿ ಎಲ್ಲ, ಸಖಿಯರ ಅಭಿಮಾನ ಗೇಡಿಗೆ।।2।। ಮಾವನ ಮರ್ದಿಸಿದವಗೆ, ಅಲ್ಲಿ ಸೋಳ ಸಾಸಿರ ಗೋಪ್ಯರ ಮದುವೆ ಆದವಗೆ। ಹಾವಿನ ಮ್ಯಾಲೊರಗಿದವಗೆ। ಕಾವೇರಿ ತೀರದ ರಂಗ ವಿಠಲಗೆ।।3।।

ಕೇಳೋ ಕೋಪಿಸಬೇಡ ರಾಗ: ರೇಗುಪ್ತಿ, ಝುಂಪೆತಾಳ

ಕೇಳೋ ಕೋಪಿಸಬೇಡ ಹೇಳಿದರೆ ಫಲವಿಲ್ಲ। ಹೇಳಲಂಜುವೆನು ನಿನ್ನ ಬಾಳ ಬಳಗಕ್ಕೆಲ್ಲ ಪಾಲಿಸು ಅಭೀಷ್ಟವನು ವ್ಯಾಳಗಿರಿ ವೆಂಕಟೇಶ ಈಶ।।ಪ।। ತಲೆಹೊಡಕ ಹಿರಿಯಮಗ ಧರೆಗೆ ಪೂಜಿತನಲ್ಲ। ಬಲುಭಂಡ ನಿನ್ನಯ ಕಿರಿಯಮಗ। ಲಲನೆ ಲೋಭಿಗಳ ಮನೆ ನೆಲಸಿಹಳು ಸೊಸೆತಾನು। ಹೊಲೆಯಕುಲವರಿಯದವಳು।।1।। ಮಗಳ ಮಾರ್ಗವು ಡೊಂಕು

ಮೈದುನ ಗುರುದ್ರೋಹಿ। ಮೊಮ್ಮಗನು ಬಲು ಚಾಡಿಖೋರ। ಹಗರಣಕೆ ನೀ ಎಂಜಲ್ಹಣ್ಣನ್ನು ಮೆದ್ದು। ಮೂಜಗದೊಡೆಯನೆನಿಸಿ ಮೆರೆದೆ ತಿರಿದೆ॥2॥ ಹಲವಂಗದವನೆಂದು ಆಡಲೇತಕೆ। ಕುಡುತೆ ಪಾಲ ಸವಿದುಂಡ ರನ್ನ। ನೆಲೆಗೆ ಸಿಲುಕಿದ ನೀನು ಪುರಂದರವಿಠಲನೆ। ಸಲಹಿದಾಸನ ಮಾಡಿದೆ ಬಿಡದೆ॥3॥

ಗುರುವ ನಿಂದಿಸುವನೇ **ರಾಗ: ಮೋಹನ**

ಗುರುವ ನಿಂದಿಸುವನೇ ಪರಮ ಭಕ್ತ। ನರಕದಲಿ ಹೊರಳಾಡಿ ನರಳುವನೇ ಮುಕ್ತಾ॥ಪ॥ ಮರೆಯದೇ ಹರಿಸ್ಮರಣೆ ಮಾಡುವನೆ ಮತಿಹೀನ। ಮೆರೆದುಗರ್ವದಿ ಮದದಿ ತಿರುಗುವನೆ ಜ್ಞಾನಿ। ಅರಿತು ಅನ್ನವನಿಕ್ಕಿ ಉಪಚರಿಸುವನೆ ಪಾಪಿ। ಪರಸತಿಗೆ ಭ್ರಮಿಸುವನೆ ಪರಮ ಸತ್ಪುರುಷಾ॥1॥ ದಾನಧರ್ಮ ಉಪಕಾರ ಮಾಡುವನೆ ಮತಿಹೀನ। ಶ್ವಾನನಂದದಿ ಮನೆ ಮನೆ ತಿರುಗುವನೇ ಜ್ಞಾನಿ। ಸ್ನಾನ ಸಂಧ್ಯಾದಿಗಳ ಮಾಡುವನೆ ಅತಿ ಮೂಢ। ಜ್ಞಾನಿಗಳ ಕೂಡೆ ಜಗಳಾಡುವನೆ ಸತ್ಪುರುಷಾ॥2॥ ಕಡಿದು ರಣದೊಳಗೆ ಜಯಿಸುವನೆ ರಣಹೇಡಿ। ಒಡೆಯನೊಪ್ಪಿಸಿ ಓಡಿ ಬರುವನೇ ಬಂಟಾ। ಸಿರಿವದನ ಕಾಗಿನೆಲೆಯಾದಿ ಕೇಶವನಂಘ್ರಿ।ಎಡೆಬಿಡದೆ ಭಜಿಸುವನೆ ಪರಮದುರ್ಮಾರ್ಗಿ॥3॥

ಜಲದ ನೀಲಗಾತ್ರ ಏತರ ಚೆಲುವೆ (ಸಂವಾದ) **ರಾಗ:ಮಧ್ಯಮಾವತಿ, ರೂಪಕತಾಳ**

ಜಲದ ನೀಲಗಾತ್ರಏತರ ಚೆಲುವೆ ರುಕ್ಮಿಣೀ। ಬಿಳಿಯ ಜಡೆಯ ಮೈಯ್ಯ ಭೋಗಿಗೊಲೆದ ಪಾರ್ವತಿ॥ಪ॥ ಉದಕದೋಳಗೆ ವಾಸವೇಕೆ ಸದನವಿಲ್ಲವೇ। ಸುದತಿ ಸುಡುವೆಕಾಡಿಗಿಂತ ಲೇಸು ಅಲ್ಲವೇ॥1॥ ಶೃಂಗಬೆನ್ನಲಿ ಪೊತ್ತವನ ಸೊಗಸು ನೋಡಿದ್ಯಾ। ಗಂಗೆ ಶಿರದಿ ಪೊತ್ತವನ ಗರ್ವ ಕೇಳಿದ್ಯಾ॥2॥ ವಸುಧೆ ನೆಗಹಿ ಬೇರು ಮೆಲ್ಲಲು ಅಶನವಿಲ್ಲವೇ। ಹಸಿದು ವಿಷವ ಕುಡಿವುದೆಂತು ಸ್ವಾದವಲ್ಲವೇ॥3॥ ಕೊರಳ ಕರುಳ ಸರವು ಯಾಕೆ ಸರವು ದೊರಕದೇ। ಕೊರಳ ರುಂಡಮಾಲೆಯೇಕೆ ಕಾಂಚನವಿಲ್ಲವೇ॥4॥ ವಸುಧೇಗೀಶನಾಗಿ ಬಲಿಯ ಬೇಡಲಿಲ್ಲವೇ। ಎಸೆವೊ ಕಪಾಲಪಿಡಿದ ಕರ್ತನಲ್ಲವೇ॥5॥ ಮಾತೆ ಶಿರವ ತರಿದವನ ಮಾತು ಕೇಳಿದ್ಯಾ। ತಾತನಾಣೆ ಸುತನ ಕೊಂದ ನೀತಿ ನೋಡಿದ್ಯಾ॥6॥ ಕೋತಿಗಳನು ಕೂಡಲಿಕ್ಕೆ ಜಾತಿ ಇಲ್ಲವೇ। ಭೂತಗಣಗಳಾಳ್ವುದಕ್ಕೆ ಭೀತಿ ಇಲ್ಲವೇ॥7॥ ಕಂಜನೇತ್ರೆ ಹಾವು ತುಳಿದ ಅಂಜಿಕೆ ಬಾರದೇ। ಮಂಜುಳ ವಚನೆ ಮೈ ಎಲ್ಲಾ ಸರ್ಪಕುಂಜರ ಭೂಷಣಾ॥8॥ ಹತ್ತಿರಿದ್ದ ನಾರಿರೋಳು ಬೆತ್ತಲಿರುವರೇ। ಉತ್ತುಮರಾದ ವನಿತೆ ಶಾಪ ಹತ್ತಲಿಲ್ಲವೆ॥9॥ ಹತ್ತಲಿದ್ದ ವಾಜಿಯ ಬಿಟ್ಟು ಹದ್ದನೇರುವರೇ। ಎತ್ತಿನ ಬೆನ್ನನೇರಿದವನು ಉತ್ತುಮನಾದನೇ॥10॥ ಹರಿಹರರೊಳು ಭೇದವೇನೆ ಹೇಳೆ ರುಕ್ಮಿಣಿ ಪುರಂದರ ವಿಠಲ ತಾನೆ ಬಲ್ಲ ಕೇಳೆ ಪಾರ್ವತಿ॥11॥

ನಿನ್ನ ಸಂಸಾರದಲಿ ಸುಖವಿಲ್ಲವಮ್ಮ **ರಾಗ: ಸಾವೇರಿ, ಛಾಪುತಾಳ**

ನಿನ್ನ ಸಂಸಾರದಲಿ ಸುಖವಿಲ್ಲವಮ್ಮ।ಘನ್ನಪುರಿ ಕ್ಷೇತ್ರದ ಕಾಮಾಕ್ಷಿಯಮ್ಮ॥ಪ॥ ಪಿತೃಗೃಹವು ಎಂದರೆ ಅತಿಶಯದ ಬೆಟ್ಟಗಳು। ಪತಿಗೃಹವ ನೋಡಿದರೆ ಗಿರಿಗಹ್ವರಗಳು। ಸುತರ ಚೆಲುವೆಂದರೆ ಆನೆಮುಖ ಆರುಮುಖ। ಸತಿ ಸವತಿ ಗಂಗೆಜೊತೆ ಹಿತವೇನು ನಿನಗಮ್ಮ॥1॥ ಲಕ್ಷ ಲೋಕೇಶ್ವರಿಯೆ ಭಿಕ್ಷುಕನು ಪತಿರಾಯ। ಎತ್ತೊಂದು ನಿನ್ನ ಹೊತ್ತು ಸುತ್ತುವುದೆ ಪೇಳಮ್ಮ। ಮತ್ತೆಲ್ಲ ಭೂತಗಣ ನಿನ್ನ ಪರಿಚಾರಕರು। ಎತ್ತ ತಿರುಗಿದರತ್ತ ವರಬೇಡ್ವ ಭಕುತರು॥2॥ ಶ್ರೀಮಾತೆ ನೀಎನ್ನ ಮಂದಿರಕೆ ಬಂದರೆ। ಶ್ರೀಕಂಠದಲಿ ಹಾಡಿ ಆರಾಧಿಸುವೆನಮ್ಮ। ಶ್ರೀಲಲಿತೆ ನಿನ್ನಯ ಶ್ರೀ ಚರಣ ಸೇವೆಗಳ। ಶ್ರೀಭಾಗ್ಯವೊಂದನೆ ಬೇಡುವೆನು ನಾನಮ್ಮ॥3॥

ಬೈಯ್ಯದವಗಿಂತಲು ಬೈಯ್ಯುವನೇ **ರಾಗ: ಮೋಹನ**

ಬೈಯ್ಯದವಗಿಂತಲು ಬೈಯ್ಯುವನೇ ಮೇಲು। ಹೊಯ್ಯದವಗಿಂತಲು ಹೊಯ್ಯುವನೆ ಮೇಲು॥ ಕೈಯ ಮುಗಿವವಗಿಂತ ಕೈ ಎತ್ತುವವ ಮೇಲು। ಕೈ ಐಯ್ಯ ತೋರೆನಲೊಲ್ಲೆ ಮಾಯಕಾರಾ ॥ಪ॥ ಒಬ್ಬ ಶರಧಿಯ ಪೊಕ್ಕ ಒಬ್ಬ ಖಡ್ಗವ ಹಿಡಿದ।

ಒಬ್ಬ ಸತಿಯನೆ ಕದ್ದ ಒಬ್ಬ ಬೈದ।। ಎಬ್ಬಿ ನೀ ಖಾತಿಯಲಿ ಅಬ್ಬರಿಸಿ ಧಾವಿಸುತ। ಒಬ್ಬೊಬ್ಬರಿಗೂ ದಿವ್ಯದರುಶನವನಿತ್ತೆ।।1।। ಜಾರ ನೆಂದರು ಕೆಲರು ಚೋರನೆಂದರು ಕೆಲರು। ಪೋರನಿವನೆಂದರು ನಾರಿಯರು ಪಲರು। ಆರೇನು ಬೈದರು ಯಾರು ನಿಂದಿಸಿದರು। ಚಾರು ಸುಂದರ ರೂಪ ದರುಶನವಿತ್ತೆ।।2।। ಇಳೆಯನೇ ತೆತ್ತವನ ತುಳಿದವನ ಮನೆಕಾಯ್ದೆ। ಛಲದಿ ನಿಂದಿಸಿದವನ ಬಳಿಗೆ ಪೋದೆ। ಮುಳಿಸಿ ನಿಂದಿಸಿದವನ ಪಾದಗಳನೆ ತೊಳೆದೆ। ಹಳಿವು ಹೊಗಳಿಕೆ ನಿನಗೆ ಸಮವೊ ಮಾಂಗಿರಿ ರಂಗ।।3।।

ಮೂರು ನಾಮಗಳ ಧರಿಸಿದ ಕಾರಣವೇನು **ರಾಗ: ಮೋಹನ, ಆದಿತಾಳ**

ಮೂರು ನಾಮಗಳ ಧರಿಸಿದ ಕಾರಣವೇನು। ಸಾರಿ ಪೇಳೆಲೊ ಈಗಲೆ।।ಪ।। ಶ್ರೀರಮಾಪತಿ ಶ್ರೀನಿವಾಸ ವೆಂಕಟರಮಣ ಯಾರು ಇಟ್ಟರೋ ನಿನಗೆ ಮೂರು ನಾಮಗಳ।।ಅ.ಪ।। ಶುದ್ಧ ವೈಷ್ಣವರೆಲ್ಲ ಶುದ್ಧ ಮೂರುತಿ ಎಂದು। ಶುದ್ಧ ಪಾದಕೆ ಎರಗಿ ಕರವ ಮುಗಿದು। ಎದ್ದು ನೋಡಲು ನಿನ್ನ ಫಣೆಯೊಳೀಪರಿ ಇರಲು। ಮದ್ವಮತದ ದೈವವೆಂದು ಕರೆಯುವರೆ।।1।। ಸಾಲದೆ ನಿನ್ನ ಸೌಂದರ್ಯಕ್ಕೆ ಒಂದು ತಿಲಕ। ಪಾಲಸಾಗರಶಾಯಿ ಚೆಲುವಮೂರ್ತಿ। ಕಾಲಕಾಲಕೆ ಬರುವ ಭಕುತ ಜನಗಳ ವೃಂದ। ದೃಷ್ಟಿ ತಾಕುವುದೆಂದು ತೋರುವ ಬಗೆಯೋ।।2।। ಮೂರು ಲೋಕಗಳಿಹವು ಮೂರು ರೂಪನು ನಾನು। ಮೂರು ಮಾಳ್ಪೆನು ಜಗವ ಮೂರು ಗುಣದಿ। ಮೂರು ತಾಪವ ಗೆದ್ದು ಮಾರ್ಗದಿ ಭಜಿಸೆ। ಪಾರು ಮಾಡುವನೆಂದು ತೋರುವ ಬಗೆಯೋ ।।3।। ಮೂರೆರಡು ಎರಡೊಂದು ಇಂದ್ರಿಯ ವರ್ಜಿಸಲು। ತೋರುವನು ನಿಜರೂಪ ಭಕ್ತನೆಂದು। ಸಾರುತಿದ್ದರು ವಾಯು ಅರಿಯದೆ ಭಜಿಸಿದಗೆ। ಮೂರು ನಾಮಗಳೆ ಗತಿ ಎನುವ ಬಗೆಯೊ।।4।। ಶ್ರೀಲೋಲ ಕೃಷ್ಣ ಗೋಪಾಲವಿಠಲ ನಿನ್ನ। ಈ ಬಗೆಯ ಲೀಲೆಗಳ ಅರಿವರ್‍ಯಾರೊ। ವ್ಯಾಸಶಯನ ವೆಂಕಟೇಶನೆ ಎನ್ನ ಮನಕೆ। ಕಾಲ ಕಾಲಕೆ ನಿನ್ನ ಲೀಲೆಗಳ ತೋರೊ।।5।।

ಯಾಕೆ ದಯವನು ಮಾಡೆ **ರಾಗ: ಮೋಹನ**

ಯಾಕೆ ದಯವನು ಮಾಡೆ ಎಲೆ ಸಾಂಬಶಿವನೇ। ಲೋಕ ರಕ್ಷಕನೆಂಬ ಬಿರುದ ಪೊತ್ತಿಹೆಯೊ।।ಪ।। ವಾಸವೇ ಕೈಲಾಸ। ವಸನವೇ ಗಜಚರ್ಮ। ವಾಸುಕಿಯೇ ಆಭರಣ। ವನಿತೆ ಗಿರಿಜೇ। ವಾಸುದೇವನೆ ಮಿತ್ರ। ವಸುಧೆ ರಥವಾಯಿತೆಂಬ। ಇಂತಹ ಅಹಂಕಾರದೊಳು। ಎನ್ನ ಮರೆತೆಯೋ ದೇವ।।1।। ಸಾರಥಿಯೆ ಬ್ರಹ್ಮ ಮಹಮೇರುವೆಯ ಧನುವಿದಕೆ ನಾರಾಯಣಾಸ್ತ್ರ ।ಇದಕೆ ನಾಗೇಂದ್ರ ಸೂತ್ರ। ಈ ರೀತಿಯಲಿ ಮೂರು ಪುರವ ಜಯಿಸುವೆನೆಂಬ। ಇಂತಹ ಅಹಂಕಾರದಲಿ ಮರೆತೆಯೋ ಮಹದೇವ।।2।। ಬಡವನೊಡನೇಕಿನಿತು ಒಲುಮೆ ತೋರಿದೆ। ಶಿವನೆ ಬಿಡದೆನ್ನ ಕಾಯೋ। ಮನದಿಷ್ಟವೀಯೋ ಕೊಡುವರೊಳಗೇ ಎಂದು। ಬಡವನಾಗಿಯೇ ಬಂದು। ಉಡುಪಿ ಪುರ ನೆಲೆವಾಸ ಚಂದ್ರಮೌಳೀಶಾ।।3।।

ಸಾಮಾನ್ಯ

ದೇವರನಾಮ

ಅವರೆಕಾಯಿ ಬೇಕು ಕಾಲದಿ **ರಾಗ: ಕಲ್ಯಾಣಿ**

ಅವರೆಕಾಯಿ ಬೇಕು ಕಾಲದಿ। ಅವರೇಕಾಯ್‌ಬೇಕು।।ಪ।। ಅವರೆ ಬಹುರುಚಿಯವರೆ ಸಂಪದ। ಅವರಿಂದಲಿ ಮೋಕ್ಷಾಧಿ ಸಾಧನವು।।ಅ.ಪ।। ಯುಕ್ತರಾಗಿ ಇರುವ ಜನರಿಗೆ। ಭುಕ್ತಿಯನು ಕೊಡುವ। ಭಕ್ತರಿಗೆಲ್ಲಾ ಬಾಯ್ಸುವಿಯಾದಾ। ಸಕ್ತಿ ಪುಟ್ಟಿಸುವ ಸರ್ವೋತ್ತಮಪಾದ।।1।। ಇವರೆಲ್ಲ ಬೆಳೆದು ಬಿತ್ತಿ ವಿವರವಾಗಿ ಅಳೆದು। ತವಕದಿ ಮೂಟೆಯ ಕಟ್ಟಿಟ್ಟಿದ್ದರೆ। ಜವನವರೆಳೆಯುವ ಕಾಲಕ್ಕೊದಗುವ।।2।। ಹಿತರಾಗೀ ಅವರೆ ಮಾತಾ। ಪಿತರಾಗೀ ಅವರೆ ಗತಿದಾಯಕರಾಗಿ ಅವರೆ ಭೂಸುತೇ ಗುರರಾಮವಿಠ್ಠಲರೀರ್ವರು।।3।।